**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ-**

ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಏನೇನು ವಿಚಾರ ಬರೆಸಿ ಹಾಕಿದ್ದೇನೆ ಎಂದು ನನಗೆ ಗೊತ್ತು. ಸರ್ವೆ ನಂ. 128 ಮತ್ತು 129 ಟಿ. ನಾಗರಾಜಪ್ಪ ಎಂಬುವವರಿಗೆ ಸೇರಿದ ಜಮೀನುಗಳು. ಸದರಿ ವಿಚಾರವನ್ನು ತನ್ನ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿದ್ದಿರಾ ಎಂದರೆ ಸರ್ವೆ ನಂಬರ್ ಹೇಳಿದ್ದೆ ಎನ್ನುತ್ತಾರೆ. ಸದರಿ ಜಮೀನು ಕುಟವಾಡಿ ಗ್ರಾಮದ ಜಮೀನು ಆಗಿರುತ್ತದೆ. ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿದ್ದಿರಾ ಎಂದರೆ ಸರ್ವೆ ನಂಬರ್ ಹೇಳಿದ್ದೆ ಆದರೆ ಗ್ರಾಮವನ್ನು ಬರೆದಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಮೇಲೆ ಹೇಳಿದ ಸರ್ವೆ ನಂ. 128 ಮತ್ತು 129 ರ ಜಮೀನು ಟಿ. ನಾಗರಾಜಪ್ಪ ರವರಿಗೆ ಸೇರಿದ್ದು ಎಂದು ದಾಖಲೆ ಹಾಜರು ಪಡಿಸಿಲ್ಲ. ಈಗ್ಗೆ 5-6 ವರ್ಷಗಳ ಹಿಂದೆ ಅವರ ಹೆಸರಿನಲ್ಲಿ ಆರ್.ಟಿ.ಸಿ ಇದ್ದ ಕಾರಣ ನಾಗರಾಜಪ್ಪ ರವರಿಗೆ ಸೇರಿದ ಜಮೀನು ಎಂದು ಹೇಳುತ್ತಿದ್ದೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ದಾಖಲೆಗಳನ್ನು ಪರಿಶೀಲಿಸಿದ್ದಿರಾ ಎಂದರೆ ಸಾಕ್ಷಿ ದಾಖಲೆ ಪರಿಶೀಲಿಸಿಲ್ಲ ಎನ್ನುತ್ತಾರೆ. ಈ ದಾವೆ ಯಾರು ಯಾರ ವಿರುದ್ಧವಾಗಿ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಯಾವ ಚಕ್ಕುಬಂದಿ ಜಮೀನಿನ ಮೇಲೆ ಈ ದಾವೆ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ಸರ್ವೆ ನಂ. ನನಗೆ ಗೊತ್ತಿಲ್ಲ. ಈ ಕೇಸ್ ನ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.